# 13th BRICS Summit

September 06, 2021

## 13 ನೇ ಬ್ರಿಕ್ಸ್ ಶೃಂಗಸಭೆ

ಸೆಪ್ಟೆಂಬರ್ 06, 2021

1. ಭಾರತದ ನಡೆಯುತ್ತಿರುವ 2021 ರ ಬ್ರಿಕ್ಸ್ ಅಧ್ಯಕ್ಷತೆಯ ಭಾಗವಾಗಿ, ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು 13 ನೇ ಬ್ರಿಕ್ಸ್ ಶೃಂಗಸಭೆಯ ಅಧ್ಯಕ್ಷತೆಯನ್ನು 9 ಸೆಪ್ಟೆಂಬರ್ 2021 ರಂದು ವರ್ಚುವಲ್ ರೂಪದಲ್ಲಿ ನಡೆಸಲಿದ್ದಾರೆ. ಸಭೆಯಲ್ಲಿ ಬ್ರೆಜಿಲ್ ಅಧ್ಯಕ್ಷ ಎಚ್.ಇ. ಶ್ರೀ ಜೈರ್ ಬೋಲ್ಸನಾರೊ; ರಷ್ಯಾದ ಅಧ್ಯಕ್ಷ, ಎಚ್ಇ ಶ್ರೀ ವ್ಲಾಡಿಮಿರ್ ಪುಟಿನ್; ಚೀನಾದ ಅಧ್ಯಕ್ಷ, ಎಚ್.ಇ ಶ್ರೀ ಕ್ಸಿ ಜಿನ್ ಪಿಂಗ್;ಮತ್ತು ದಕ್ಷಿಣ ಆಫ್ರಿಕಾದ ಅಧ್ಯಕ್ಷ, ಎಚ್.ಇ ಶ್ರೀ ಸಿರಿಲ್ ರಾಮಫೋಸಾರವರು ಭಾಗವಹಿಸಲಿದ್ದಾರೆ. ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ, ಶ್ರೀ ಅಜಿತ್ ದೋವಲ್, ಹೊಸ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷ, ಶ್ರೀ ಮಾರ್ಕೋಸ್ ಟ್ರಾಯೊಜ, ಬ್ರಿಕ್ಸ್ ಬಿಸಿನೆಸ್ ಕೌನ್ಸಿಲ್ನ ಪರ ತಾತ್ಕಾಲಿಕ ಅಧ್ಯಕ್ಷರು, ಶ್ರೀ ಓಂಕಾರ್ ಕನ್ವಾರ್ ಮತ್ತು ಬ್ರಿಕ್ಸ್ ಮಹಿಳಾ ವ್ಯಾಪಾರ ಒಕ್ಕೂಟದ ಪರ ತಾತ್ಕಾಲಿಕ ಅಧ್ಯಕ್ಷರು, ಡಾ.ಸಂಗೀತಾ ರೆಡ್ಡಿ, ಇವರು 2021 ರ ಶೃಂಗಸಭೆಯಲ್ಲಿ ನಾಯಕರಿಗೆ ತಮ್ಮ ಕ್ಷೇತ್ರದ ಅಡಿಯಲ್ಲಿ ಈ ವರ್ಷದ ಫಲಿತಾಂಶಗಳ ವರದಿಗಳನ್ನು ಪ್ರಸ್ತುತಪಡಿಸುತ್ತಾರೆ.

2. ಶೃಂಗಸಭೆಯ ವಿಷಯವೆಂದರೆ 'ಬ್ರಿಕ್ಸ್@15: ನಿರಂತರತೆ, ಬಲವರ್ಧನೆ ಮತ್ತು ಒಮ್ಮತಕ್ಕಾಗಿ ಬ್ರಿಕ್ಸ್‌ನೊಳಗಿನ ಸಹಕಾರ. ಭಾರತವು ತನ್ನ ಅಧ್ಯಕ್ಷತೆಗಾಗಿ ನಾಲ್ಕು ಆದ್ಯತೆಯ ಕ್ಷೇತ್ರಗಳನ್ನು ರೂಪಿಸಿದೆ. ಇವುಗಳು ಬಹುಪಕ್ಷೀಯ ವ್ಯವಸ್ಥೆಯ ಸುಧಾರಣೆ, ಭಯೋತ್ಪಾದನೆ ನಿಗ್ರಹ, ಎಸ್‌ಡಿಜಿಗಳನ್ನು ಸಾಧಿಸಲು ಡಿಜಿಟಲ್ ಮತ್ತು ತಾಂತ್ರಿಕ ಸಾಧನಗಳನ್ನು ಬಳಸುವುದು ಮತ್ತು ಜನರ ವಿನಿಮಯವನ್ನು ಹೆಚ್ಚಿಸುವುದು. ಈ ಕ್ಷೇತಗಳ ಜೊತೆಗೆ, ನಾಯಕರು ಕೋವಿಡ್-19 ಸಾಂಕ್ರಾಮಿಕದ ಪರಿಣಾಮ ಮತ್ತು ಇತರ ಪ್ರಸ್ತುತ ಜಾಗತಿಕ ಮತ್ತು ಪ್ರಾದೇಶಿಕ ಸಮಸ್ಯೆಗಳ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ.

3. ಬ್ರಿಕ್ಸ್ ಶೃಂಗಸಭೆಯ ಅಧ್ಯಕ್ಷತೆಯನ್ನು ಪ್ರಧಾನಿ ಮೋದಿ ವಹಿಸಿಕೊಳ್ಳುವುದು ಇದು ಎರಡನೇ ಬಾರಿ. ಈ ಹಿಂದೆ ಅವರು 2016 ರಲ್ಲಿ ಗೋವಾ ಶೃಂಗಸಭೆಯ ಅಧ್ಯಕ್ಷತೆ ವಹಿಸಿದ್ದರು. ಈ ವರ್ಷ ಬ್ರಿಕ್ಸ್‌ನ ಭಾರತೀಯ ಅಧ್ಯಕ್ಷತೆಯ ಜೊತೆಯಲ್ಲೇ ಬ್ರಿಕ್ಸ್‌ನ ಹದಿನೈದನೆಯ ವಾರ್ಷಿಕೋತ್ಸವದ ಸಮಾರಂಭವು ನಡೆಯುತ್ತದೆ, ಇದು ಶೃಂಗಸಭೆಯ ವಿಷಯದಲ್ಲಿ ಪ್ರತಿಫಲಿಸುತ್ತದೆ.

**ನವ ದೆಹಲಿ**
**ಸೆಪ್ಟೆಂಬರ್ 06, 2021**

DISCLAIMER: This is an approximate translation. The original is available in English on MEA's website and may be referred to as the official press release.